ಶ್ರೀ ಎಂ. ಮಲ್ಲಪ್ಪ.—ಸುತ್ತಮುತ್ತಲ ಗ್ರಾಮದ ಜನಗಳು ಮತ್ತು ಜಾನುವಾರುಗಳು ತಿರುಗಾಡಲಿಕ್ಕೆ ಬಹಳ ತೊಂದರೆಯಾಗಿದೆ ಮತ್ತು ಇದು ಬಹಳ ಮುಖ್ಯವಾದ ರಸ್ತೆಯಮೇಲೆ ಇರುವ ಸೇತುವೆಯಾದುದರಿಂದ ಈ ವರ್ಷದ ಬಜೆಟ್ಟಿನಲ್ಲಿ ಸೇರಿಸಿ ಕೆಲಸ ಪ್ರಾರಂಭಿಸುವುದಕ್ಕೆ ಸಾಧ್ಯವೇ, ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ಈ ವರ್ಷದ ಬಜೆಟ್ ಪ್ರೆಸೆಂಟ್ ಆಗಿದೆ. ಈಗ ಸೇರಿಸುವುದಕ್ಕೆ ಬರುವುದಿಲ್ಲ. ಆದರೆ ಮುಂದೆ ಏನಾದರೂ ಹೊಸ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದ್ದರೆ ಇದರ ವಿಚಾರ ಮಾಡುತ್ತೇವೆ.

Advance Increments

339. **Sri P. VENKATAGIRIYAPPA** (Kolar).—

Will the Minister for Agriculture and Education be pleased to state :—

(*a*) whether the Government is granting two advance increments to teachers who have acquired Master's Degree in the Education Department ;

(*b*) what are the reasons for not extending the benefits of two advance increments to Indian Language Teachers in Education Department ?

A.— **Sri K. V. SHANKARA GOWDA** (Minister for Agriculture and Education).—

(*a*) Yes.

(*b*) This is being considered.

ಶ್ರೀ ಪಿ. ವೆಂಕಟಗಿರಿಯಪ್ಪ.—ಮಾನ್ಯರ್ಸ್ ಡಿಗ್ರಿ ಪಡೆದಿರುವ ಉಪಾಧ್ಯಾಯರಿಗೆ ಶಿಕ್ಷಣ ಇಲಾಖೆಯಲ್ಲಿ ಎರಡು ವಾರ್ಷಿಕ ಹೆಚ್ಚುವರಿ ಇಂಕ್ರಿಮೆಂಟ್ ಕೊಡಬೇಕೆಂದು ಆದೇಶ ಕೊಟ್ಟಿರುವಾಗ ಭಾರತೀಯ ಭಾಷಾ ಉಪಾಧ್ಯಾಯರು ಪರಿಣತರಾಗಿರ ವವರಿಗೆ ಕೊಡದೆ ಇರುವುದಕ್ಕೆ ಕಾರಣವೇನು ? ಭಾರತೀಯ ಭಾಷೆಯ ಬಗ್ಗೆ ರಾಜ್ಯ ಸರ್ಕಾರಕ್ಕೆ ಇರುವ ಅನಾದರಣೆಯೇ ಇದಕ್ಕೆ ಕಾರಣವೆಂದು ಭಾವಿಸಬಹುದೇ ?

ಶ್ರೀ ಕೆ. ವಿ. ಶಂಕರಗೌಡ.—ಅನಾದರಣೆಯೇನೂ ಇಲ್ಲ. ಗೌರ್ನಮೆಂಟ್ ಆರ್ಡರಿನಲ್ಲಿ ಭಾಷಾ ಉಪಾಧ್ಯಾಯರ ವಿಷಯ ಸೇರಿರಲಿಲ್ಲ. ಅದನ್ನು ಸೇರಿಸಬೇಕೆಂಬ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಸದ್ಯದಲ್ಲಿಯೇ ಸೇರಿಸಲ್ಪಡುತ್ತದೆ.

ಶ್ರೀ ಎಂ. ನಾಗಪ್ಪ.—ಸದ್ಯದಲ್ಲಿಯೇ ಎಂದರೆ ಇನ್ನೂ ಎಷ್ಟು ದಿವಸ ಆಗಬಹುದು ?

ಶ್ರೀ ಕೆ. ವಿ. ಶಂಕರಗೌಡ.— ಎಷ್ಟು ದಿವಸವೂ ಇಲ್ಲ. ಒಂದೆರಡು ತಿಂಗಳಲ್ಲಿ ಆಗಬಹುದು.

ಶ್ರೀ ಪಿ. ವೆಂಕಟಗಿರಿಯಪ್ಪ.—ಭಾರತೀಯ ಭಾಷಾ ಉಪಾಧ್ಯಾಯರಿಗೆ ಕೂಡ ಆದಷ್ಟು ಜಾಗ್ರತೆ ಈ ಸೌಲಭ್ಯವನ್ನು ಕಲ್ಪಿಸಿಕೊಡುತ್ತೀರಾ, ಸ್ವಾಮಿ ?

ಶ್ರೀ ಕೆ. ವಿ. ಶಂಕರಗೌಡ.—ಆ ವಿಷಯ ಪರಿಶೀಲನೆಯಲ್ಲಿದೆ. ಆದಷ್ಟು ಜಾಗ್ರತೆ ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆ ಎಂದು ಹೇಳಿದೆ.

Sri RAJA PID NAIK.—May I know what are all the languages with which we are concerned in our schools ?

Sri K. V. SHANKARA GOWDA.—They are Kannada, Hindi and English.